**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ಗಳ ನ್ಯಾಯಾಲಯ, ಹೊಸಪೇಟೆ.**

**ಸಿ.ಸಿ.ನಂ.:286/2024**

ದೂರುದಾರರುಃ ರಾಜ್ಯದ ಪರವಾಗಿ ಆರಕ್ಷಕ ನಿರೀಕ್ಷಕರು, ಸಂಚಾರ ಪೊಲೀಸ್ ಠಾಣೆ, ಹೊಸಪೇಟೆ, ವಿಜಯನಗರ ಜಿಲ್ಲೆ.

- ವಿರುದ್ಧ -

ಆಪಾದಿತರುಃ ನಿಲೇಶ್ ಜಾದವ್ ತಂದೆ ನಾರಾಯಣ ಜಾದವ್, ವಯಸ್ಸು 25 ವರ್ಷ, ವಾಸಃ ಪಟೀಲೋವಸ್ತಿ ಗ್ರಾಮ, ಬಾಗೇವಾಡಿ ಅಂಚೆ, ಅಕುಲಜ್, ಮಾಸಿರೋಷಾ ತಾಲೂಕು, ಸೊಲ್ಲಾಪುರ ಪಟ್ಟಣ, ಮಹಾರಾಷ್ಟ ರಾಜ್ಯ.

# ಆಪಾದನೆ

ದಿನಾಂಕಃ 27.12.2023 ರಂದು ರಾತ್ರಿ 7-10 ಗಂಟೆ ಸುಮಾರಿಗೆ ಅಶ್ವಿನ್ ಕುಮಾರ್ ರವರ ಮೋಟಾರ್ ಸೈಕಲ್ ನಂಃಕೆಎ-35-ಇಬಿ-8689 ನೇದ್ದರ ಹಿಂದುಗಡೆ ಸಾಕ್ಷಿ-1 ರವರು ಕುಳಿತುಕೊಂಡು ಕೊಂಡನಾಯಕನಹಳ್ಳಿ ಕಡೆಯಿಂದ ಶ್ರೀಕರಿ ಕಾಲೇಜ್ ಹತ್ತಿರ ಇರುವ ಯಲ್ಲಾಲಿಂಗೇಶ್ವರ ಮಠಕ್ಕೆ ಹೋಗುತ್ತಿದ್ದಾಗ, ಅದೇ ಸಮಯದಲ್ಲಿ ಆರೋಪಿಯಾದ ನೀವು ಮೋಟಾರ್ ಸೈಕಲ್ ನಂಃಎಂಹೆಚ್-45-ಎಕೆ-2474 ನೇದ್ದರ ಹಿಂದುಗಡೆ ಸಾಕ್ಷಿ-9 ರವರನ್ನು ಕುಳ್ಳಿರಿಸಿಕೊಂಡು ಹೊಸಪೇಟೆ ಕಡೆಯಿಂದ ಹಂಪೆ ಕಡೆ ಅತಿವೇಗವಾಗಿ ಮತ್ತು ಅಜಾಗರೂಕತೆಯಿಂದ ಚಲಾಯಿಸಿಕೊಂಡು ಹೋಗಿ ಸಾಕ್ಷಿ-1 ರವರ ಮೋಟಾರ್ ಸೈಕಲ್ ಗೆ ಡಿಕ್ಕಿಪಡಿಸಿ ಅಪಘಾತವನ್ನುಂಟು ಮಾಡಿದ್ದು, ಆ ಮೂಲಕ ಆರೋಪಿಯಾದ ನೀವು ಭಾ.ದಂ.ಸಂ.**279** ನೇದ್ದರ ಅಡಿಯಲ್ಲಿ ಅಪರಾಧ ಮಾಡಿರುತ್ತೀರಾ ಎಂದು ಆರೋಪ ಮಾಡಲಾಗಿದೆ.

ಎರಡನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಈ ಮೇಲೆ ತಿಳಿಸಿದ ರೀತಿಯಲ್ಲಿ ಅಪಘಾತಪಡಿಸಿದ ಪರಿಣಾಮ, ಸಾಕ್ಷಿ-1 ರವರ ತಲೆ ಹಿಂದುಗಡೆ, ಎಡಪಾದಕ್ಕೆ, ಬೆನ್ನಿಗೆ, ರಕ್ತಗಾಯವಾಗಿದ್ದು, ಸಾಕ್ಷಿ-9 ರವರ ಬಲಕಣ್ಣಿನ ಮೇಲೆ ಹಾಗೂ ಬಲಮುಂಗೈಗೆ ಸಾದಾ ಸ್ವರೂಪದ ರಕ್ತಗಾಯಗಳುಂಟಾಗಿದ್ದು, ಆ ಮೂಲಕ ಆರೋಪಿಯಾದ ನೀವು

ಭಾ.ದಂ.ಸಂ.ಕಲಂ **337** ರ ಅಡಿಯಲ್ಲಿ ಅಪರಾಧ ಮಾಡಿರುತ್ತೀರಾ ಎಂದು ಆರೋಪ ಮಾಡಲಾಗಿದೆ.

ಮೂರನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಈ ಮೇಲೆ ತಿಳಿಸಿದ ರೀತಿಯಲ್ಲಿ ಅಪಘಾತಪಡಿಸಿದ ಪರಿಣಾಮ, ಆರೋಪಿಯಾದ ನಿಮಗೆ ಬಲಮುಂಗೈ ಹತ್ತಿರ ತೀವ್ರ ಸ್ವರೂಪದ ರಕ್ತಗಾಯಗಳುಂಟಾಗಿದ್ದು, ಆ ಮೂಲಕ ಆರೋಪಿಯಾದ ನೀವು ಭಾ.ದಂ.ಸಂ.ಕಲಂ **338** ರ ಅಡಿಯಲ್ಲಿ ಅಪರಾಧ ಮಾಡಿರುತ್ತೀರಾ ಎಂದು ಆರೋಪ ಮಾಡಲಾಗಿದೆ.

ನಾಲ್ಕನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಈ ಮೇಲೆ ತಿಳಿಸಿದ ರೀತಿಯಲ್ಲಿ ಅಪಘಾತಪಡಿಸಿದ ಪರಿಣಾಮ, ಅಶ್ವಿನ್ ಕುಮಾರ್ ರವರ ತಲೆ ಹಿಂದುಗಡೆ, ಎಡಕಾಲಿಗೆ ತೀವ್ರ ಸ್ವರೂಪದ ರಕ್ತಗಾಯಗಳಾಗಿದ್ದು, ಬಲಕಿವಿಯಲ್ಲಿ ರಕ್ತ ಹೊರಬಂದಿದ್ದು, ಬಳ್ಳಾರಿ ವಿಮ್ಸ್ ಆಸ್ಪತ್ರೆಯಲ್ಲಿ ದಿನಾಂಕಃ 27.12.2023 ರಂದು ರಾತ್ರಿ 10-05 ಗಂಟೆಗೆ ಮೃತಪಟ್ಟಿದ್ದು, ಆ ಮೂಲಕ ಆರೋಪಿಯಾದ ನೀವು ಭಾ.ದಂ.ಸಂ.**304(ಎ)** ನೇದ್ದರ ಅಡಿಯಲ್ಲಿ ಅಪರಾಧ ಮಾಡಿರುತ್ತೀರಾ ಎಂದು ಆರೋಪ ಮಾಡಲಾಗಿದೆ.

ಕೊನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಮೋಟಾರ್ ಸೈಕಲ್ ನಂಃಎಂಹೆಚ್-45-ಎಕೆ-2474 ನೇದ್ದನ್ನು ನಿಗದಿತ ವೇಗವನ್ನು ಮೀರಿ ಅತೀ ವೇಗವಾಗಿ ಚಲಾಯಿಸಿದ್ದು, ಆ ಮೂಲಕ ಆರೋಪಿಯಾದ ನೀವು ಕಲಂ **183** ಐಎಂವಿ ಕಾಯ್ದೆ ಯ ಅಡಿಯಲ್ಲಿ ಅಪರಾಧ ಮಾಡಿರುತ್ತೀರಾ ಎಂದು ಆರೋಪ ಮಾಡಲಾಗಿದೆ.

ಪ್ರಶ್ನೆ - 1. ನೀವು ಮೇಲೆ ಹೇಳಿರುವ ಆಪಾಧನೆಯನ್ನು ಅರ್ಥ ಮಾಡಿಕೊಂಡಿದ್ದೀರಾ?

ಉತ್ತರ- ಆ-

ಪ್ರಶ್ನೆ - 2. ನೀವು ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ ಅಥವಾ ನಿಮ್ಮ ಪರವಾಗಿ ಪ್ರತಿರಕ್ಷಣೆ ಇದೆಯಾ?

ಉತ್ತರ- ಆ-

(ಆಪಾದಿತರ ಹೇಳಿಕೆಯನ್ನು ನನ್ನ ಸಮ್ಮುಖದಲ್ಲಿ ಪಡೆದುಕೊಂಡಿದ್ದು, ಸದರಿ ಹೇಳಿಕೆಯು ಆಪಾಧಿತನ ಸಂಪೂರ್ಣ ಮತ್ತು ಸರಿಯಾದ ಹೇಳಿಕೆಯನ್ನು ಒಳಗೊಂಡಿರುತ್ತದೆ.)

ದಿಃ 18.01.2025.

ಅಪರ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರ.ದ.ನ್ಯಾದಂ. ಹೊಸಪೇಟೆ.